# ಕರ್ನಾಟಕ ರಾಜ್ಯಪತ್ರ

**ಅಧಿಕೃತವಾಗಿ ಪ್ರಕಟಿಸಲಾದುದು**

**ವಿಶೇಷ ರಾಜ್ಯ ಪತ್ರಿಕೆ**

| ಭಾಗ – ೩<br>Part – III | ಬೆಂಗಳೂರು, ಮಂಗಳವಾರ, ೧೪ ಅಕ್ಟೋಬರ್, ೨೦೨೫ (ಆಶ್ವಯುಜ ೨೨, ಶಕವರ್ಷ ೧೯೪೭)<br>**BENGALURU, TUESDAY, 14 OCTOBER, 2025 (AASHWAYUJA 22, SHAKAVARSHA 1947)** | ನಂ. ೬೫೧<br>**No. 651** |
|---|---|---|



## ರಾಜ್ಯ ಚುನಾವಣಾ ಆಯೋಗ, ಕರ್ನಾಟಕ

2ನೇ ಮತ್ತು 3 ನೇ ಮಹಡಿ, ನಂ 16 ಬಳ್ಳಾರಿ ರಸ್ತೆ, ಸದಾಶಿವನಗರ, ಬೆಂಗಳೂರು-560080,

ಇ ಮೇಲ್- sec.karnataka@ka.gov.in ದೂರವಾಣಿ: 080-22205189/93


## ಅಧಿಸೂಚನೆ

**ಸಂಖ್ಯೆ: SECK/ULB/GELN(GBA)/1/2025-ULB E- 247649, ಬೆಂಗಳೂರು ದಿನಾಂಕ: 13.10.2025**

ಭಾರತ ಸಂವಿಧಾನದ ಅನುಚ್ಛೇದ 243 ಜೆಡ್ ಎ ಯೊಂದಿಗೆ ಓದಲಾದ ಗ್ರೇಟರ್ ಬೆಂಗಳೂರು ಆಡಳಿತ ಅಧಿನಿಯಮ, 2024ರ ಪ್ರಕರಣ 34 ಮತ್ತು ಗ್ರೇಟರ್ ಬೆಂಗಳೂರು ಆಡಳಿತ (ಚುನಾವಣೆ) ನಿಯಮಗಳು, 2025ರ ನಿಯಮ 3ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಗ್ರೇಟರ್ ಬೆಂಗಳೂರು ಪ್ರಾಧಿಕಾರದ 5 ನಗರ ಪಾಲಿಕೆಗಳಿಗೆ ಚುನಾವಣೆಯನ್ನು ನಡೆಸುವ ಸಲುವಾಗಿ ನಿಗದಿತ ಅಧಿಕಾರಿಗಳನ್ನು ನೇಮಕ ಮಾಡಿ ಈ ಕೆಳಗಿನಂತೆ ಆದೇಶ ಹೊರಡಿಸಿದೆ.

ರಾಜ್ಯ ಚುನಾವಣಾ ಆಯೋಗವು ಕೋಷ್ಟಕದ ಭಾಗ-1ರ ಅಂಕಣ (1) ರಲ್ಲಿ ನಮೂದಿಸಿರುವ ಮುಖ್ಯ ಆಯುಕ್ತರು, ಗ್ರೇಟರ್ ಬೆಂಗಳೂರು ಪ್ರಾಧಿಕಾರ ಇವರನ್ನು ಅವರ ಹೆಸರಿನ ಮುಂದೆ ಅಂಕಣ (2) ರಲ್ಲಿ ಹೆಸರಿಸಿರುವ ನಗರ ಪಾಲಿಕೆಗಳ ವ್ಯಾಪ್ತಿಗಳಿಗೊಳಪಟ್ಟ ಅಂಕಣ (3) ರಲ್ಲಿರುವ ವಾರ್ಡುಗಳನ್ನೊಳಗೊಂಡ ಪ್ರದೇಶಕ್ಕೆ ಜಿಲ್ಲಾ ಚುನಾವಣಾ ಅಧಿಕಾರಿಗಳೆಂದು **(District Election Officer)** ನೇಮಿಸಿ ಆದೇಶಿಸಿದೆ.

ಜಿಲ್ಲಾ ಚುನಾವಣಾ ಅಧಿಕಾರಿಯಾಗಿ ಚುನಾವಣಾ ಸಂಬಂಧಿತ ಎಲ್ಲಾ ಕಾರ್ಯಗಳನ್ನು ನಿರ್ವಹಿಸುವಲ್ಲಿ ಸದರಿಯವರಿಗೆ ಸಹಾಯ ಮಾಡಲು ಕೋಷ್ಟಕದ ಭಾಗ-2ರ ಅಂಕಣ (1) ರಲ್ಲಿ ನಮೂದಿಸಿರುವ ಆಯುಕ್ತರು, ಬೆಂಗಳೂರು ಕೇಂದ್ರ/ ಉತ್ತರ/ ದಕ್ಷಿಣ/ ಪೂರ್ವ/ ಪಶ್ಚಿಮ ನಗರ ಪಾಲಿಕೆ, ಇವರುಗಳನ್ನು ಅಂಕಣ (2) ರಲ್ಲಿ ಹೆಸರಿಸಿರುವ ನಗರ ಪಾಲಿಕೆಗಳ ವ್ಯಾಪ್ತಿಗಳಿಗೊಳಪಟ್ಟ ಅಂಕಣ (3) ರಲ್ಲಿರುವ ವಾರ್ಡುಗಳನ್ನೊಳಗೊಂಡ ಪ್ರದೇಶಕ್ಕೆ ಅಪರ ಜಿಲ್ಲಾ ಚುನಾವಣಾ ಅಧಿಕಾರಿಗಳೆಂದು **(Additional District Election Officer)** ನೇಮಿಸಿ ಆದೇಶಿಸಿದೆ.

ರಾಜ್ಯ ಚುನಾವಣಾ ಆಯೋಗದ ನಿರ್ದೇಶನಗಳನ್ವಯ ಜಿಲ್ಲಾ ಚುನಾವಣಾಧಿಕಾರಿಗಳು ಮತ್ತು ಅಪರ ಜಿಲ್ಲಾ ಚುನಾವಣಾಧಿಕಾರಿಗಳು ತಮ್ಮ ವ್ಯಾಪ್ತಿಯಲ್ಲಿ ಬರುವ ವಾರ್ಡುಗಳ ಚುನಾವಣಾ ಕಾರ್ಯಗಳನ್ನು ವಿಧ್ಯುಕ್ತವಾಗಿ ನಿರ್ವಹಿಸಲು

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



ಮತ್ತು ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಮತದಾರರ ನೋಂದಣಿ) ನಿಯಮಗಳು, 2025 ರನ್ವಯ ವಾರ್ಡುವಾರು ಮತದಾರರ ಪಟ್ಟಿಯನ್ನು ತಯಾರಿಸಲು ಆದೇಶಿಸಿದೆ..

**ಕೋಷ್ಟಕ**

| ಭಾಗ-1 | | |
|---|---|---|
| ಜಿಲ್ಲಾ ಚುನಾವಣಾ ಅಧಿಕಾರಿ | ನಗರ ಪಾಲಿಕೆಯ ಹೆಸರು | ವಾರ್ಡ್‌ಗಳು |
| 1 | 2 | 3 |
| ಮುಖ್ಯ ಆಯುಕ್ತರು, ಗ್ರೇಟರ್ ಬೆಂಗಳೂರು ಪ್ರಾಧಿಕಾರ | ಬೆಂಗಳೂರು ಕೇಂದ್ರ ನಗರ ಪಾಲಿಕೆ | ಎಲ್ಲಾ ವಾರ್ಡುಗಳು |
| | ಬೆಂಗಳೂರು ಉತ್ತರ ನಗರ ಪಾಲಿಕೆ | ಎಲ್ಲಾ ವಾರ್ಡುಗಳು |
| | ಬೆಂಗಳೂರು ದಕ್ಷಿಣ ನಗರ ಪಾಲಿಕೆ | ಎಲ್ಲಾ ವಾರ್ಡುಗಳು |
| | ಬೆಂಗಳೂರು ಪೂರ್ವ ನಗರ ಪಾಲಿಕೆ | ಎಲ್ಲಾ ವಾರ್ಡುಗಳು |
| | ಬೆಂಗಳೂರು ಪಶ್ಚಿಮ ನಗರ ಪಾಲಿಕೆ | ಎಲ್ಲಾ ವಾರ್ಡುಗಳು |

| ಭಾಗ-2 | | |
|---|---|---|
| ಅಪರ ಜಿಲ್ಲಾ ಚುನಾವಣಾ ಅಧಿಕಾರಿಗಳು | ನಗರ ಪಾಲಿಕೆಯ ಹೆಸರು | ವಾರ್ಡ್‌ಗಳು |
| 1 | 2 | 3 |
| ಆಯುಕ್ತರು, ಬೆಂಗಳೂರು ಕೇಂದ್ರ ನಗರ ಪಾಲಿಕೆ | ಬೆಂಗಳೂರು ಕೇಂದ್ರ ನಗರ ಪಾಲಿಕೆ | ಎಲ್ಲಾ ವಾರ್ಡುಗಳು |
| ಆಯುಕ್ತರು, ಬೆಂಗಳೂರು ಉತ್ತರ ನಗರ ಪಾಲಿಕೆ | ಬೆಂಗಳೂರು ಉತ್ತರ ನಗರ ಪಾಲಿಕೆ | ಎಲ್ಲಾ ವಾರ್ಡುಗಳು |
| ಆಯುಕ್ತರು, ಬೆಂಗಳೂರು ದಕ್ಷಿಣ ನಗರ ಪಾಲಿಕೆ | ಬೆಂಗಳೂರು ದಕ್ಷಿಣ ನಗರ ಪಾಲಿಕೆ | ಎಲ್ಲಾ ವಾರ್ಡುಗಳು |
| ಆಯುಕ್ತರು, ಬೆಂಗಳೂರು ಪೂರ್ವ ನಗರ ಪಾಲಿಕೆ | ಬೆಂಗಳೂರು ಪೂರ್ವ ನಗರ ಪಾಲಿಕೆ | ಎಲ್ಲಾ ವಾರ್ಡುಗಳು |
| ಆಯುಕ್ತರು, ಬೆಂಗಳೂರು ಪಶ್ಚಿಮ ನಗರ ಪಾಲಿಕೆ | ಬೆಂಗಳೂರು ಪಶ್ಚಿಮ ನಗರ ಪಾಲಿಕೆ | ಎಲ್ಲಾ ವಾರ್ಡುಗಳು |

**ಕಾರ್ಯದರ್ಶಿ (ಪ್ರ),**
**ರಾಜ್ಯ ಚುನಾವಣಾ ಆಯೋಗ, ಕರ್ನಾಟಕ.**

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

THAMMAIAH